ಶ್ರೀ ಎಂ. ವೀರಪ್ಪಮೊಯ್ಲಿ.—ಇದೇ ರೀತಿ ಗುಪಾಸ್ತ ಶ್ಯಾನುಭೋಗರೂ ಕೂಡ ನಾನ್ ಹೆರಿಡಿಟರಿಯವರು ಇರುತ್ತಾರೆ. ಇಂಥ ಕೆಲವು ಪ್ರಸಂಗಗಳಲ್ಲಿ ಕೆಲವರಿಗೆ ಕೊಟ್ಟಿದ್ದೀರಿ, ಇನ್ನು ಕೆಲವರಿಗೆ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳುವುದರಲ್ಲಿ ಸತ್ಯವಿದೆ. ಇದು ನನಗೂ ಗೊತ್ತಿದೆ. ಕೆಲವು ಕಡೆ ನಾನ್ ಹೆರಿಡಿಟರಿ ಗುಪಾಸ್ತ ಪಟೇಲರಿಗೆ, ಗುಪಾಸ್ತ ಶ್ಯಾನುಭೋಗರಿಗೆ ಕೊಟ್ಟಿಲ್ಲ. ಈಗ ತಾವು ಏನು ಕೆಲವರಿಗೆ ಕೊಟ್ಟಿದೆ, ಕೆಲವರಿಗೆ ಕೊಟ್ಟಿಲ್ಲ ಎಂಬ ವಿಚಾರವನ್ನು ತಿಳಿಸಿದ್ದೀರಿ ಇದನ್ನು ಖಂಡಿತವಾಗಿಯೂ ಪರಿಶೀಲಿಸುತ್ತೇನೆ ಮತ್ತು ಯಾರಿಂ ತಪ್ಪು ಮಾಹಿತಿಯನ್ನು ನನಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ವಿಚಾರ ಮಾಡುತ್ತೇನೆ. ಆನೇಕ ಸಂದರ್ಭಗಳಲ್ಲಿ ಇಂಥ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದು ಅವರಿಗೆ ಅನುಕಂಪದ ಆಧಾರದ ಮೇಲೆ ಮಾಸಾಶನವನ್ನು ಕೊಡಬೇಕೆಂದಿದೆ. ಇದನ್ನು ನಾವು ಅನುಸರಿಸುತ್ತಿದ್ದೇವೆ. ತಾವು ಹೇಳಿದಂತೆ ೧೫–೨೦ ವರ್ಷಗಳ ಕಾಲ ಈ ರೀತಿಯ ಕೆಲಸವನ್ನು ಮಾಡಿರುತಕ್ಕವರೂ ಇದ್ದಾರೆ ಮತ್ತು ವಂಶ ಪಾರಂಪರ್ಯವಾಗಿ ಮಾಡಿರುತಕ್ಕವರೂ ಇದ್ದಾರೆ. ಇಂಥ ಪ್ರಸಂಗವನ್ನು ನಾವು ಗಂಭೀರವಾಗಿ ಪರಿಶೀಲಿಸುತ್ತೇವೆ.

ಪ್ರಶಸ್ತಿ ಪಡೆದಿರುವ ಪೋಲೀಸ್ ಸಿಬ್ಬಂದಿ.

೬೦೭. ಶ್ರೀ ಆರ್. ನಾರಾಯಣ(ಬೆಳ್ಳಾವಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶಿಷ್ಟ ಸೇವೆ ಸಲ್ಲಿಸಿದ ರಾಜ್ಯದ ಪೋಲೀಸ್ ಅಧಿಕಾರಿಗಳಿಗೆ ಪ್ರತಿವರ್ಷ ಎಷ್ಟು ಮಂದಿಗೆ ರಾಷ್ಟ್ರಪತಿಗಳ ಪೋಲೀಸ್ ಪದಕಗಳನ್ನು ದೊರೆಯುತ್ತವೆ ?

ಆ) ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಪ್ರತಿವರ್ಷ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ಉತ್ತಮ ಸೇವೆ ಸಲ್ಲಿಸುತ್ತಿರುವ ಪೋಲೀಸ್ ಅಧಿಕಾರಿಗಳಿಗೆ ಕೊಡುತ್ತಿರುವುದು ಸರಿಯಷ್ಟೆ, ಇವುಗಳನ್ನು ರಾಜ್ಯ ಪ್ರಶಸ್ತಿಯೆಂದು ಪರಿಗಣಿಸಲಾಗಿದೆಯೇ ?

ಇ) ಕೇಂದ್ರ ಸರ್ಕಾರವು ರಾಷ್ಟ್ರ ಪ್ರಶಸ್ತಿಗಳಿಸಿದ ಸಿಬ್ಬಂದಿಯವರಿಗೆ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ತೋರಿಸಿರುವಾಗ ರಾಜ್ಯ ಸರ್ಕಾರ ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿ ಪಡೆದವರಿಗೆ ಬಸ್ಸಿನ ಪ್ರಯಾಣಕ್ಕೆ ರಿಯಾಯಿತಿ ಆಲೋಚನೆ ಇದೆಯೇ ?

ಈ) ರಾಜ್ಯ ಸರ್ಕಾರದಿಂದ ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿ ಪಡೆದ ಪೋಲೀಸ್ ಸಿಬ್ಬಂದಿ ವರ್ಗದವರಿಗೆ ಈ ಮುನ್ನ ನಿವೇಶನವಿಲ್ಲದವರಿಗೆ ಆದ್ಯತೆ ಮೇರೆಗೆ ನಿವೇಶನಗಳನ್ನು ನೀಡಲಾಗುತ್ತಿತ್ತೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—

ಅ) ಸಾಮಾನ್ಯವಾಗಿ ಒಂದು ಅಥವಾ ಎರಡು ಪದಕ ನೀಡಲಾಗುತ್ತಿತ್ತು. ಈಗ ಎರಡರಿಂದ ನಾಲ್ಕು ಪದಕಗಳನ್ನು ನೀಡಲಾಗುತ್ತಿದೆ.

ಆ) ಮುಖ್ಯಮಂತ್ರಿಗಳ ಪದಕಗಳನ್ನು ಈಗ ರಾಜ್ಯೋತ್ಸವ ದಿನಾಚರಣೆಗೆ ಬದಲಾಗಿ ಪೋಲೀಸು ಕಲ್ಯಾಣ ದಿನವಾದ ಏಪ್ರಿಲ್ ೨ನೇ ದಿನದಂದು ನೀಡಲಾಗುತ್ತಿದೆ. ಇದನ್ನು ರಾಜ್ಯ ಪ್ರಶಸ್ತಿಯೆಂದು ಪರಿಗಣಿಸಿದೆ.

ಇ) ಸಧ್ಯದಲ್ಲಿ ಯಾವ ಪ್ರಸ್ತಾಪನೆ ಇರುವುದಿಲ್ಲ.

ಈ) ಇಲ್ಲ.

ಶ್ರೀ ಆರ್. ನಾರಾಯಣ್.—ಸನ್ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪದಕಗಳನ್ನು ಈಗ ರಾಜ್ಯೋತ್ಸವದ ದಿನಾಚರಣೆಗೆ ಬದಲಾಗಿ ಪೋಲೀಸು ಕಲ್ಯಾಣ ದಿನವಾದ ಏಪ್ರಿಲ್ ೨ನೇ ದಿನದಂದು ನೀಡಲಾಗುತ್ತಿದೆ. ಮತ್ತು ಇದನ್ನು ರಾಜ್ಯ ಪ್ರಶಸ್ತಿ ಎಂದು ಪರಿಗಣಿಸಿರುವುದು ಬಹಳ ಸ್ವಾಗತಾರ್ಹವಾಗಿದೆ. ಮತ್ತು ಈ ರೀತಿ ಕೊಟ್ಟ ಸ್ಟೇಟ್ ಅವಾರ್ಡ್‌ಗೆ ಏನಾದರೂ ಒಂದು ಮಹತ್ವ ದೊರಕಬೇಕಾದರೆ ಕೆಲವೊಂದು ರಿಯಾಯಿತಿಗಳನ್ನು ಕೊಡಬೇಕು, ಉತ್ತೇಜನವನ್ನು ಕೊಡಬೇಕು. ಈಗ ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ಪೋಲೀಸ್ ಅಧಿಕಾರಿಗಳಿಗೆ ರೈಲ್ವೆ ಪ್ರಯಾಣದಲ್ಲಿ ಒಂದು ರೀಯಾಯತಿಯನ್ನು ತೋರಿಸಿದ್ದಾರೆ. ಅದೇ ರೀತಿಯಲ್ಲಿ ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಯನ್ನು ಗಳಿಸಿದಂಥವರಿಗೆ ನಮ್ಮ ರಾಜ್ಯದಲ್ಲಿ ಬಸ್ಸಿನ ಪ್ರಯಾಣದರದಲ್ಲಿ ರೀಯಾಯಿತಿಯನ್ನು ತೋರಿಸಬೇಕೆಂದು ಕೇಳಿರುತ್ತೇನೆ. ಮತ್ತು ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿಯನ್ನು ಗಳಿಸಿದಂಥವರಿಗೆ...

ಅಧ್ಯಕ್ಷರು.—ಮಾನ್ಯ ನಾರಾಯಣ್‌ರವರೇ, ತಾವು ಪ್ರಶ್ನೆಯನ್ನು ಕೇಳಿ ?

ಶ್ರೀ ಆರ್. ನಾರಾಯಣ್.—ಬಸ್ ಪ್ರಯಾಣದಲ್ಲಿ ಏನಾದರು ರಿಯಾಯಿತಿ ತೋರಿಸಬೇಕೆಂದು ಕೇಳಿರುವುದಕ್ಕೆ ಸಭ್ಯದಲ್ಲಿ ಯಾವ ಪ್ರಸ್ತಾಪವು ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ ನಾನಾದರು ಹೇಳುವುದು ಇಷ್ಟೇ. ಅವರು ಗಳಿಸಿರುವ ಪ್ರಶಸ್ತಿಗೆ ಏನಾದರೂ ಒಂದು ಪ್ರಾಮುಖ್ಯತೆ ಇರಬೇಕಾದರೆ ಕೆಲವೊಂದು ರಿಯಾಯಿತಿ ಮತ್ತು ಉತ್ತೇಜನ ವನ್ನು ಕೊಡಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿ ಹಿಂಸಾಚಾರ ಮತ್ತು ಅಪರಾಧ ಗಳು ಬಹುಸಂಖ್ಯೆಯಲ್ಲಿ ಹೆಚ್ಚಾಗುತ್ತಿದೆ. ಅಷ್ಟೇ ಮಟ್ಟಿಗೆ ಪೋಲೀಸ್‌ನವರ ಕರ್ತವ್ಯ ಮತ್ತು ಜವಾಬ್ದಾರಿಯೂ ಕೂಡ ಜಾಸ್ತಿಯಾಗಿದೆ. ಇಂತಹವರಿಗೆ ಕೆಲವೊಂದು ರೀತಿಯ ಪ್ರಾಮುಖ್ಯತೆ ಯನ್ನು ಮತ್ತು ಪ್ರೋತ್ಸಾಹವನ್ನು ಕೊಡುತ್ತಿರುವಾಗ ಅವರಿಗೆ ನೈತ್ತಿಕ ಸ್ಥೈರ್ಯವನ್ನು ತುಂಬುವ ದೃಷ್ಟಿ ಯಿಂದ ಅವರಿಗೆ ಬಸ್ಸಿನ ಪ್ರಯಾಣದಲ್ಲಿ ರಿಯಾಯಿತಿಯನ್ನು ಕೊಡಬೇಕು. ಮತ್ತು ನಿವೇಶನ ಇಲ್ಲ ದವರಿಗೆ ನಿವೇಶವನ್ನು ಕೊಡುವುದರಲ್ಲಿ ಯಾವ ತೊಂದರೆಯೂ ಇಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೆಲವೊಂದು ಸಲಹೆ ಗಳನ್ನು ಕೊಟ್ಟಿದ್ದಾರೆ, ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆಂದು ಹೇಳುತ್ತೇನೆ.

ವರದಕ್ಷಿಣೆ ಸಾವುಗಳು

೪೨೫. ಶ್ರೀ ಎಂ.ವಿ. ವೆಂಕಟಪ್ಪ (ಪಂಚಳ್ಳಿಬಾಗಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವರದಕ್ಷಿಣೆ ಸಾವುಗಳ ಸಂಖ್ಯೆ

ಆ) ನ್ಯಾಯಾಲಯದಲ್ಲಿ ಮೊಕದ್ದಮೆ ಪ್ರಕರಣಗಳ ಸಂಖ್ಯೆ

ಇ) ಶಿಕ್ಷೆಗೊಳಗಾದವರ ಒಟ್ಟು ಸಂಖ್ಯೆ (ನ್ಯಾಯಾಲಯದಲ್ಲಿ ಶಿಕ್ಷೆಯಾದವರು)

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ವರದಕ್ಷಿಣೆ ಸಾವುಗಳ ಸಂಖ್ಯೆ ಈ ಕೆಳಕಂಡಂತಿವೆ.—

೧೯೮೬	...	೬೫
೧೯೮೭	...	೧೦೬
೧೯೮೮	...	೧೪೨
೧೯೮೯	...	೧೯೦
೧೯೯೦	...	೭೮
		(೩೧-೫-೯೦ರವರಗೆ)

ಆ)

೧೯೮೬	...	೬೦
೧೯೮೭	...	೯೫
೧೯೮೮	...	೧೪೪
೧೯೮೯	...	೧೨೫
೧೯೯೦	...	೫೮

ಇ) ೧೯೮೬ ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ೫೫ ಪ್ರಕರಣಗಳಲ್ಲಿ ೮ ಜನ ನ್ಯಾಯಾಲಯ ದಿಂದ ಶಿಕ್ಷೆಗೊಳಗಾಗಿದ್ದಾರೆ,

೧೯೮೭ ರಲ್ಲಿ ದಾಖಲಾದ ಒಟ್ಟು ಪ್ರಕರಣಗಳಲ್ಲಿ ೫೫ ಪ್ರಕರಣಗಳಲ್ಲಿ ೮ ಜನರು ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿದ್ದಾರೆ.

೧೯೮೮, ೧೯೮೯ ಮತ್ತು ೧೯೯೦ ರಲ್ಲಿ ಯಾವ ಪ್ರಕರಣಗಳೂ ಇಲ್ಲಿಯವರೆಗೂ ಶಿಕ್ಷೆ ಗೊಳಗಾಗಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ೧೯೮೬–ಮತ್ತು ೧೯೮೭ರಲ್ಲಿ ಒಟ್ಟು ೧೬ ಜನರು ವರದಕ್ಷಿಣೆಯ ಕಾಯಿದೆಯನ್ವಯ ಶಿಕ್ಷೆಗೆ ಒಳಗಾಗಿದ್ದಾರೆಂದು ಹೇಳಿದ್ದಾರೆ. ಇದರಲ್ಲಿ ಐ.ಎ ಎಸ್. ಐ.ಪಿ.ಎಸ್· ಕೆ.ಎ.ಸ್. ಮತ್ತು ಡಾಕ್ಟರುಗಳು ಸಹ ಸೇರಿರುತ್ತಾರೆಯೇ ಎಂದು ಕೇಳುತ್ತೇನೆ.